## ಸೆಲೆಬ್ರಿಟಿ

■ ಹನಿ

# ಪೋಪ್ ನಿರ್ಗಮನ



ರೋಮನ್ ಕ್ಯಾಥೊಲಿಕ್ ಜಗತ್ತಿನ ಪರಮೋಚ್ಚ ಗುರು, ಆರನೇ ಪೋಪ್ ಬೆನೆಡಿಕ್ಟ್ ಸ್ವಇಚ್ಛೆಯಿಂದ ರಾಜೀನಾಮೆ ನೀಡಿ ಜಾಗತಿಕ ಸುದ್ದಿಯಾಗಿದ್ದಾರೆ. ನುಡಿದಂತೆಯೇ ಫೆಬ್ರುವರಿ 28ರಂದು ಅಧಿಕಾರ ತ್ಯಜಿಸಿ ವ್ಯಾಟಿಕನ್ ಧರ್ಮಕೇಂದ್ರದಿಂದ ಹೊರನಡೆದಿದ್ದಾರೆ. 2 ತಿಂಗಳ ಕಾಲ ಹಳ್ಳಿಯೊಂದರಲ್ಲಿ ಅಜ್ಞಾತನಾಗಿ ವಿಶ್ರಾಂತಿ ಪಡೆಯಲಿದ್ದು, ಆ ಬಳಿಕ ತಮಗಾಗಿಯೇ ವ್ಯಾಟಿಕನ್‌ನಲ್ಲಿ ಇರುವ ಆಶ್ರಮದಲ್ಲಿ ವಿಶ್ರಾಂತ ಜೀವನ ನಡೆಸುವುದು ಅವರ ಮುಂದಿನ ಯೋಜನೆ.

85 ಕಡಿಮೆ ವಯಸ್ಸೇನಲ್ಲ. ಆದರೆ ಹೀಗೆ ಪೋಪ್ ಹುದ್ದೆಯಲ್ಲಿ ಇರುವಾಗಲೇ ಸ್ವಇಚ್ಛೆಯಿಂದ ರಾಜೀನಾಮೆ ಕೊಟ್ಟದ್ದು ವಿಶೇಷ. ಅದಕ್ಕೆ ಅವರು ನೀಡಿರುವ ಕಾರಣ: ಮನಸ್ಸು ಮತ್ತು ದೇಹದ ಬಲದ ಕೊರತೆ! ಈ ಹಿಂದೆ ಹೀಗೆ ಹುದ್ದೆಯಲ್ಲಿ ಇದ್ದಾಗಲೇ ರಾಜೀನಾಮೆ ನೀಡಿದವರು ಇಬ್ಬರೇ. ಒಬ್ಬರು 1415ರಲ್ಲಿ ರಾಜೀನಾಮೆ ಕೊಟ್ಟಿದ್ದರೂ ಅದು ಸ್ವಇಚ್ಛೆಯಿಂದ ಆಗಿರಲಿಲ್ಲ. 1294ರಲ್ಲಿ ಆಗಿನ ಪೋಪ್ ಸ್ವ ಇಚ್ಛೆಯಿಂದ ರಾಜೀನಾಮೆ ಕೊಟ್ಟದ್ದು ಬಿಟ್ಟರೆ, ಈಗ ಪೋಪ್ ಬೆನೆಡಿಕ್ಟ್‌ರದ್ದೇ ಮೊದಲ ಪ್ರಕರಣ.

ಆರನೇ ಬೆನೆಡಿಕ್ಟ್ ಅವರು ಪೋಪ್ ಆಗಿ ಆಯ್ಕೆಯಾದದ್ದು 2005ರಲ್ಲಿ– ಪೋಪ್ ಎರಡನೇ ಜಾನ್ ಪಾಲ್‌ರ ಉತ್ತರಾಧಿಕಾರಿಯಾಗಿ. ಅದಕ್ಕೂ ಮುನ್ನ ಬಿಷಪ್ ಆಗಿದ್ದಾಗಲೇ ಅವರು ಮೂರು ಸಲ ರಾಜೀನಾಮೆ ಕೊಟ್ಟಿದ್ದರು. 'ಇನ್ನು ಸಾಕು, ವಯಸ್ಸಾಯಿತು' ಎಂದಿದ್ದರು. ಆದರೆ ಎರಡನೇ ಜಾನ್‌ಪಾಲ್ ಒಪ್ಪಿರಲಿಲ್ಲ. ಕೊನೆಗೆ ಎರಡನೇ ಜಾನ್‌ಪಾಲ್ ನಿಧನದ ಬಳಿಕ ಉತ್ತರಾಧಿಕಾರಿಯಾಗಿ ಆಯ್ಕೆ ಆಗಿದ್ದೇ ಅಲ್ಲದೆ, ಎಂಟು ವರ್ಷಗಳ ಕಾಲ ದೊಡ್ಡ ಜವಾಬ್ದಾರಿಯನ್ನೂ ನಿರ್ವಹಿಸಿದರು. ತಮ್ಮ ಆಡಳಿತದ ಅವಧಿಯಲ್ಲಿ ವ್ಯಾಟಿಕನ್‌ನಲ್ಲಿ ಹಲವು ಆಡಳಿತ ಸುಧಾರಣೆಗಳನ್ನು ನಡೆಸಲು ಹೊರಟು ಪೋಪ್ ಬೆನೆಡಿಕ್ಟ್ ಕಿರಿಕಿರಿ ಅನುಭವಿಸಿದ್ದೂ ಉಂಟು. ಧರ್ಮಪೀಠದಲ್ಲಿ ಪರಸ್ಪರರ ನಡುವಣ ದ್ವೇಷ, ಸ್ಪರ್ಧೆಗಳಿಂದಾಗಿ ಹಲವು ರಹಸ್ಯ ವಿಷಯಗಳು ಮಾಧ್ಯಮಗಳಿಗೆ ಸೋರಿಕೆಯಾಗಿದ್ದವು. 'ಎಲ್ಲ ಖಾಸಗಿತನಗಳನ್ನೂ ಕಳೆದುಕೊಳ್ಳಬೇಕಾದ ಹುದ್ದೆಯಿದು. ಸಮುದ್ರದಲ್ಲಿ ತೇಲುವಾಗ ಭಾರೀ ಬಿರುಗಾಳಿ ಬೀಸಿ ದೋಣಿ ಹೊಯ್ದಾಡಿದ್ದೂ ಇದೆ. ಕರ್ತನ ಕೃಪೆಯಿಂದ ಅವನ್ನೆಲ್ಲ ಎದುರಿಸಿದೆ' ಎಂದು ಅವರೇ ವಿದಾಯದ ಭಾಷಣದಲ್ಲಿ ಹೇಳಿದ್ದಿದೆ.

ಜರ್ಮನಿಯ 2–3 ವಿಶ್ವವಿದ್ಯಾನಿಲಯಗಳಲ್ಲಿ ಧರ್ಮಶಾಸ್ತ್ರದ ಪ್ರೊಫೆಸರ್ ಆಗಿದ್ದ ಜೋಸೆಫ್ ಅಲಾಸಿಯಸ್ ರಾಝಿಂಗರ್, ಧರ್ಮಗುರುವಾದ ಆರಂಭದಲ್ಲಿ ಉದಾರವಾದಿ ವಿಚಾರಗಳ ಒಲವು ಹೊಂದಿದ್ದವರು. ಆದರೆ ಬಿಷಪ್ ಆದ ಬಳಿಕ ಹೆಚ್ಚು ಸಾಂಪ್ರದಾಯಿಕ ನಿಲುವು ತಳೆದರು. ಪೋಪ್ ಆದ ಬಳಿಕ ಇಸ್ಲಾಂ, ಯೆಹೂದಿ ಮುಂತಾದ ಧರ್ಮಗಳ ಬಗ್ಗೆ ಮಾಡಿದ ಕೆಲವು ಲಘು ಟೀಕೆಗಳಿಂದ ಪ್ರತಿರೋಧ ಎದುರಿಸಿದ್ದೂ ಉಂಟು. ಅದರ ಬೆನ್ನಲ್ಲೆ ಇತರ ಧರ್ಮಗಳ ಜತೆಗೆ ಸಂವಾದ ನಡೆಸುವ ಮೂಲಕ ಮತ್ತೆ ಸಂಬಂಧ ಸುಧಾರಿಸಿಕೊಂಡಿದ್ದರು. ಅದೇನೇ ಇದ್ದರೂ, ಪೋಪ್ ಹುದ್ದೆಯ ಗೌರವ ಉಳಿಸಿಕೊಳ್ಳಲು ಆರನೇ ಬೆನೆಡಿಕ್ಟ್ ಅವರು ನಿಷ್ಠೆಯಿಂದ ದುಡಿದದ್ದು ಸುಳ್ಳಲ್ಲ. ಈಗ ಸ್ವಇಚ್ಛೆಯ ರಾಜೀನಾಮೆ ಅವರ ಗೌರವವನ್ನು ಇನ್ನಷ್ಟು ಹೆಚ್ಚಿಸಿದೆ.

# ರಾಫೆಲ್ ಗೆಲ್ಲುವರೆ?



ವಿಶ್ವ ಟೆನಿಸ್ ರಂಗದಲ್ಲಿ ಒಂದು ಕಾಲದಲ್ಲಿ 'ನಂಬರ್ ಒನ್' ಸೀಡ್ ಹೊಂದಿದ್ದ ರಾಫೆಲ್ ನಡಾಲ್ ಈಗ ಮತ್ತೆ ಅದೇ ರ್ಯಾಂಕ್ ಪಡೆಯುವತ್ತ ದಾಪುಗಾಲು ಹಾಕತೊಡಗಿದ್ದಾರೆ. ಮೊಣಕಾಲಿನ ಗಾಯದ ಬಳಿಕ ಏಳು ತಿಂಗಳ ಟೆನಿಸ್ ಕೋರ್ಟ್‌ನಿಂದ ದೂರವಿದ್ದ ನಡಾಲ್, ತಿಂಗಳ ಹಿಂದೆ ಮರಳಿದ ಬಳಿಕ ಒಂದೊಂದೇ ಟೂರ್ನಿಯಲ್ಲಿ ತಮ್ಮ ಶಕ್ತಿಪ್ರದರ್ಶನ ನೀಡತೊಡಗಿದ್ದಾರೆ. ಬ್ರೆಜಿಲ್ ಓಪನ್ ಟೆನಿಸ್‌ನಲ್ಲಿ ಪ್ರಶಸ್ತಿ ಗೆದ್ದು, 'ಗಾಯಾಳು ನಾನಲ್ಲ' ಎಂದು ಪ್ರತಿಸ್ಪರ್ಧಿಗಳಿಗೆ ಸೂಚನೆ ನೀಡಿರುವ ನಡಾಲ್, ಇದೀಗ ಮೆಕ್ಸಿಕೋ ಓಪನ್‌ನಲ್ಲೂ ಗಮನಾರ್ಹ ಸಾಧನೆ ಪ್ರದರ್ಶಿಸಿದ್ದಾರೆ. ಆದರೆ ಅವರ ಕಣ್ಣು ನೆಟ್ಟಿರುವುದು ಮೇ ತಿಂಗಳಲ್ಲಿ ನಡೆಯಲಿರುವ ಫ್ರೆಂಚ್ ಓಪನ್ ಮೇಲೆ ಎನ್ನುವುದು ಖಂಡಿತಾ. ಸದ್ಯಕ್ಕೆ ಅವರದ್ದು ವಿಶ್ವದ ಐದನೇ ಸೀಡ್. ಜೊಕೊವಿಕ್, ರೋಜರ್ ಫೆಡರರ್, ಆ್ಯಂಡಿ ಮುರ್ರೆ ಮತ್ತು ಡೇವಿಡ್ ಫೆರರ್ ಅವರಿಗಿಂತ ಮೇಲಿನ ಸೀಡ್‌ಗಳಲ್ಲಿ ವಿರಾಜಮಾನರಾಗಿದ್ದಾರೆ. ಇವರೆಲ್ಲರಿಗೂ ಹಿಂದೆ ಸೋಲಿನ ರುಚಿ ತೋರಿಸಿರುವ ನಡಾಲ್, ಮರಳಿ ವಿಶ್ವದ ನಂಬರ್ ಒನ್ ಆಗುವುದು ನಿಶ್ಚಿತ ಎನ್ನುವುದು ಅಭಿಮಾನಿಗಳ ಅನ್ನಿಸಿಕೆ.

ಆದರೆ ಅದು ಅಷ್ಟು ಸುಲಭವಲ್ಲ. 27ರ ಹರೆಯದ ನಡಾಲ್ ಇನ್ನೂ ಎರಡು ವರ್ಷಗಳ ಕಾಲ ಅತ್ಯುತ್ತಮ ಫಾರ್ಮ್ ಪ್ರದರ್ಶಿಸಬಹುದಾದರೂ, ಮೊಣಕಾಲಿನ ಗಾಯ ಅವರನ್ನು ಹಂಡ್ರೆಡ್ ಪರ್ಸೆಂಟ್ ಫಿಟ್ ಆಗಲು ಬಿಟ್ಟೀತೆ.. ಎನ್ನುವುದೀಗ ಪ್ರಶ್ನೆ. ಬ್ರೆಝಿಲ್ ಮತ್ತು ಮೆಕ್ಸಿಕೊ ಎರಡೂ ಟೂರ್ನಿಗಳು ಹಾರ್ಡ್‌ಕೋರ್ಟ್ ಆಗಿರುವ ಹಿನ್ನೆಲೆಯಲ್ಲಿ ಆಟವಾಡುವಾಗ ಮೊಣಕಾಲಿಗೆ ಒತ್ತಡ ಹೆಚ್ಚು. ಆದರೆ ಅದನ್ನು ಲೆಕ್ಕಿಸದೆ ಮುನ್ನುಗ್ಗಿರುವ ನಡಾಲ್, ಆ ಮೂಲಕವೇ ತಮ್ಮ ಫಿಟ್‌ನೆಸ್ ಸೂಚನೆ ನೀಡಿದ್ದಾರೆ. ಮುಖ್ಯವಾಗಿ 'ಕಿಂಗ್ ಆಫ್ ಕ್ಲೇ' ಎಂದೇ ಬಿರುದು ಪಡೆದಿರುವ ನಡಾಲ್, ಆವೆ ಮಣ್ಣಿನ ಕೋರ್ಟ್‌ಗಳಲ್ಲಿ ನಡೆಯುವ ಯೂರೋಪಿಯನ್ ಮತ್ತು ಫ್ರೆಂಚ್ ಓಪನ್‌ಗಳಲ್ಲಿ ಮಿಂಚುವುದು ಸುಲಭ. ಆದರೆ ಅದಕ್ಕೆ ಜೊಕೊವಿಕ್, ಫೆಡರರ್ ಅವಕಾಶ ಕೊಡುವರೆ?

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65